ಬರಬಹುದೆಂದು ಊಹಿಸಿರಲಿಲ್ಲ. ಸ್ವಾತಂತ್ರ್ಯದ ನಂತರದ ಯುದ್ಧಪೂರ್ವ ಉಕ್ರೇನ್ (1991-2014) ಎಂಬುದು ಸಂಭ್ರಮ ಮತ್ತು ಪ್ರಯೋಗಗಳ ಜಾಗವಾಗಿತ್ತು. ಕೆಲವರು Experimental Avant-garde ಕವಿತೆಯನ್ನು ಬರೆಯುತ್ತಿದ್ದರು; ಕೆಲವರು ಪ್ರವರ್ಧಮಾನಕ್ಕೆ ಬರುತ್ತಿರುವ ಸ್ಲ್ಯಾಮ್ ಕಾವ್ಯ ದೃಶ್ಯದ ಭಾಗವಾಗಿದ್ದರು; ಕೆಲವರು ಉಕ್ರೇನಿಯನ್ ಭಾಷೆಯಲ್ಲಿ ಛಂದಸ್ಸು ಮತ್ತು ಪ್ರಾಸಗಳ ಸಮೃದ್ಧ ಸಾಧ್ಯತೆಗಳನ್ನು ಹುಡುಕುತ್ತಿದ್ದರು. ಯಾಕೆಂದರೆ ಉಕ್ರೇನಿಯನ್ ಭಾಷೆಯು ಸಮೃದ್ಧವಾಗಿದ್ದು, ಇಂಥಾ ಕಾವ್ಯ ಪ್ರಯೋಗಗಳಿಗೆಲ್ಲಾ ಚೆನ್ನಾಗಿ ಹೊಂದಿಕೊಳ್ಳುವಂತಿದೆ ಮತ್ತು ವಿವಿಧ ಕಾವ್ಯಾತ್ಮಕ ರೂಪಗಳೊಂದಿಗೆ ಒಡನಾಡಲು ಸಾಕಷ್ಟು ಅವಕಾಶಗಳನ್ನು ಒದಗಿಸುತ್ತದೆ. ಕವಿಗಳು ಏನು ಬೇಕಾದರೂ ಹೇಳಬಹುದಿತ್ತು- ಸರ್ಕಾರ ಅಥವಾ ಪೊಲೀಸರನ್ನು ಗೇಲಿ ಮಾಡಬಹುದಿತ್ತು, ಚರ್ಚ್ ಅನ್ನು ಟೀಕಿಸಬಹುದಿತ್ತು, ಅಥವಾ ದೇಶಭಕ್ತಿ ಮತ್ತು ಧಾರ್ಮಿಕ ಕವಿತೆಗಳನ್ನು ಮುಕ್ತವಾಗಿ ಬರೆಯಬಹುದಾಗಿತ್ತು. ಎಲ್ಲಕ್ಕೂ ಮತ್ತು ಎಲ್ಲರಿಗೂ ಇಲ್ಲಿ ಜಾಗ ಇತ್ತು. ಯುದ್ಧದ ಆರಂಭವು ನಮ್ಮೊಳಗಿನ ಆಟದ ಸ್ವಭಾವವನ್ನು ಅಡಗಿಸಿ ನಮ್ಮನ್ನು ಗಂಭೀರವಾಗಿಸಿತು. ಯುದ್ಧವು ಉಕ್ರೇನಿಯನ್ ಭಾಷೆಯಲ್ಲಿ ಕೆಲವು ಅದ್ಭುತವಾದ ಗಟ್ಟಿ ದನಿಯ ಪದ್ಯಗಳ ಹುಟ್ಟಿಗೆ ಕಾರಣವಾಗಿದೆ. ಹಾಗೆಯೇ ಅದು ಉಕ್ರೇನಿಯನ್ ಸಮಾಜದಲ್ಲಿ ಕಾವ್ಯದ ಮೂಲಕ ಮತ್ತು ಅದರಾಚೆಗೆ ನಡೆಯಬಹುದಾದ ಸಹಜ ಸಂಭಾಷಣೆಗಳ ವ್ಯಾಪ್ತಿಯನ್ನು ಕುಗ್ಗಿಸಿದೆ. ಬದುಕುಳಿಯೋಕೆ ಹೋರಾಡೋದಿದೆಯಲ್ಲ ಅದು ತುಂಬಾ ಕಷ್ಟದ ಕೆಲಸ.

**◆ ಯುದ್ಧದ ನಂತರ ಜನರ ಮನೋಧರ್ಮದಲ್ಲಾದ ಮುಖ್ಯ ಬದಲಾವಣೆಗಳೇನು?**

ಜನರು ಹೆಚ್ಚು ಮಿಸ್ ಮಾಡಿಕೊಳ್ಳುತ್ತಿರುವುದು ರೂಟಿನ್ ಲೈಫ್ ಅನ್ನು. ನಡುರಾತ್ರಿಯಲ್ಲಿ ವಾಯುದಾಳಿಯ ಸೈರನ್‌ಗಳ ಸದ್ದು ಕೇಳಿ ಎದ್ದು ಓಡಬೇಕಾದ ಸ್ಥಿತಿ. ಈಗ ಉಕ್ರೇನ್‌ನಲ್ಲಿ ವಿಮಾನ ಪ್ರಯಾಣಕ್ಕೆ ಅನುಮತಿ ಇಲ್ಲದ ಕಾರಣ ಪ್ಯಾರಿಸ್ ಅಥವಾ ಲಂಡನ್‌ನಂಥ ಮಾಯಾನಗರಿಗಳಿಗೆ ವಾರಾಂತ್ಯದಲ್ಲಿ ಫ್ಲೈಟ್ ಹಿಡಿಯುವ ಬದಲು ರೈಲು ಮತ್ತು ಬಸ್ಸುಗಳನ್ನು ಬದಲಾಯಿಸುತ್ತಾ ಗಡಿ ದಾಟಬೇಕಾಗಿದೆ. ಮೊದಲು ಎರಡು ಗಂಟೆಯಲ್ಲಿ ತಲುಪಬಹುದಾಗಿದ್ದ ಸ್ಥಳಕ್ಕೆ ಈಗ ಎರಡು ದಿನ ಬೇಕಾಗುತ್ತದೆ. ಯುದ್ಧ ಭೂಮಿಯಿಂದ ತಮ್ಮ ಪ್ರೀತಿ ಪಾತ್ರರು ಹಿಂದಿರುಗುವುದು, ರಷ್ಯಾದ ಸೇನೆ ಆಕ್ರಮಿಸಿರುವ ಪ್ರದೇಶಗಳಲ್ಲಿರುವವರು ತಮ್ಮ ಮನೆಗೆ ಮರಳಲು ಸಾಧ್ಯವಾಗುವುದು. ಇವೆಲ್ಲಾ ಹೆಚ್ಚಿನವರ ಮೊದಲ ಆದ್ಯತೆ ಆಗಿದೆ. ಯುದ್ಧದಿಂದ ದೇಶದ ಗಡಿ ದಾಟಿ ಓಡಿಹೋದ ಅನೇಕ ಉಕ್ರೇನಿಯನ್ನರು ಯುದ್ಧ ಮುಗಿದ ಕೂಡಲೇ ಮನೆಗೆ ಮರಳಲು ಆಸೆ ಪಡುತ್ತಿದ್ದಾರೆ. ಎಲ್ಲರೂ ಹಿಂದಿರುಗುವುದಿಲ್ಲ. ಕೆಲವರು ತಾತ್ಕಾಲಿಕ ಎಂದು ಭಾವಿಸಿದ್ದ ಅತಿಥೇಯ ದೇಶಗಳಲ್ಲಿ ಹೊಸ ಜೀವನವನ್ನು ಕಟ್ಟಿಕೊಂಡಿರುತ್ತಾರೆ. ಇದು ಮುಂದೊಂದು ದಿನ ಉಕ್ರೇನಿಯನ್ನರ diaspora ಕಮ್ಯುನಿಟಿಗೆ ಕಾರಣವಾಗಬಹುದು.

**◆ ನಿಮಗೆ ಪದೇಪದೇ ಬೀಳುವ ಕನಸು ಯಾವುದು?**

ಎಂತಹ ಅದ್ಭುತವಾದ ಪ್ರಶ್ನೆ! ನಿಜಕ್ಕೂ ಒಂದಿದೆ. ನಾನು ಸಣ್ಣವಳಿರುವಾಗಿನಿಂದಲೂ ಒಂದು ಪಾಳುಬಿದ್ದ ಪುಸ್ತಕದಂಗಡಿ ಅಥವಾ ಗ್ರಂಥಾಲಯದಲ್ಲಿ ಇರುವಂತೆ ಕನಸು ಬೀಳುತ್ತಿತ್ತು. ಅಲ್ಲಿ ನನಗೆ ಬೇಕಾದ ಯಾವುದೇ ಪುಸ್ತಕಗಳನ್ನು ತೆಗೆದುಕೊಳ್ಳಬಹುದು. ಮನೆಗೆ ತರಬಹುದು, ಓದಬಹುದು, ಬಚ್ಚಿಟ್ಟುಕೊಳ್ಳಬಹುದು. ಆ ನಿರ್ದಿಷ್ಟ ಸ್ಥಳದಲ್ಲಿ ಪ್ರತಿ ಬಾರಿ, ಜಗತ್ತು ನನಗೆ ಮುಕ್ತವಾಗಿ ತೆರೆದುಕೊಂಡಂತೆ ಅನಿಸುತ್ತದೆ. ಅದೊಂದು ಮಾಯಾ ಪ್ರಪಂಚ. ಯಾವುದೇ ಹಿಂಜರಿಕೆಯಿಲ್ಲದ ಮತ್ತು ಅನಂತ ಹುಡುಕಾಟಗಳ ಭರವಸೆ ನೀಡುವಂತಹದ್ದು. ಸಣ್ಣ ಮಗುವಾಗಿದ್ದಾಗಿನಿಂದಲೂ ಅಪಾರ ಸಾಧ್ಯತೆಗಳಿಂದ ತುಂಬಿದ ಪುಸ್ತಕ ಪ್ರಪಂಚ ಬಗ್ಗೆ ನನಗೆ ಹೀಗೆ ಅನ್ನಿಸಿತ್ತು. ಖಂಡಿತವಾಗಿ ನಂತರ ನಾನು ಅದೇ ಮುಗ್ಧ ಧೋರಣೆಯನ್ನು ಒಟ್ಟಾರೆ ಜಗತ್ತಿಗೆ ಅನ್ವಯಿಸಿದೆ. ವಾಸ್ತವಿಕ ಲೋಕವನ್ನು ನನ್ನ ಪ್ರೀತಿಯ ಮಾಯಾ ಪುಸ್ತಕ ಜಗತ್ತಿನಂತೆ ನೋಡಿದ್ದೇ ಬಹುಶಃ ನನ್ನನ್ನು ಇಂದು ಈ ಸ್ಥಾನಕ್ಕೆ ಏರಲು ಸಹಾಯ ಮಾಡಿರಬಹುದು. ●